## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಸ್ವಾಧೀನಪಡಿಸಿರುವ ಜಮೀನುಗಳಿಗೆ ಭೂದರ ನಿಗದಿಪಡಿಸುವ ಕುರಿತು.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ಸಿಐ 400 ಎಸ್‌ಪಿಕ್ಯೂ 2011, ದಿನಾಂಕ: 26.11.2012.
2) ಸರ್ಕಾರದ ಆದೇಶ ಸಂಖ್ಯೆ: ಸಿಐ 63 ಎಸ್‌ಪಿಕ್ಯೂ 2018, ದಿನಾಂಕ: 24.03.2018.
3) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಟಿಪ್ಪಣಿ ಸಂಖ್ಯೆ: ಬೃಮಕೈಸ/ 237/ 2021(H), ದಿನಾಂಕ: 11.12.2021 ಮತ್ತು ಬೃಮಕೈಸ/ 507/ 2022, ದಿನಾಂಕ: 20.01.2022.

---*---

<u>ಪ್ರಸ್ತಾವನೆ</u> :-

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 29(2)ರಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವತಿಯಿಂದ ಭೂಸ್ವಾಧೀನಪಡಿಸುವ ಜಮೀನುಗಳಿಗೆ ಸಂಬಂಧಪಟ್ಟ ಭೂ ಮಾಲೀಕರೊಂದಿಗೆ ಸಂಧಾನ ನಡೆಸಿ, ಯೋಗ್ಯವಾದ ಬೆಲೆಯನ್ನು ನಿರ್ಧರಣೆ ಮಾಡಿ, ಭೂ ಪರಿಹಾರವನ್ನು ಪಾವತಿಸಲಾಗುತ್ತಿದೆ.

ಕೆ.ಐ.ಎ.ಡಿ.ಬಿ. ವತಿಯಿಂದ ಸ್ವಾಧೀನಪಡಿಸಿಕೊಂಡಿರುವ 30-00 ಎಕರೆವರೆಗಿನ ಜಮೀನಿಗೆ ಕೆ.ಐ.ಎ.ಡಿ.ಬಿ.ಯ ವಿಶೇಷ ಜಿಲ್ಲಾಧಿಕಾರಿಯವರ ಹಾಗೂ 30-00 ಎಕರೆಗಿಂತ ಹೆಚ್ಚಿನ ವಿಸ್ತೀರ್ಣದ ಜಮೀನನ್ನು ಒಂದೇ ಸ್ಥಳದಲ್ಲಿ ಸ್ವಾಧೀನಪಡಿಸಿ, ಅಂತಿಮ ಅಧಿಸೂಚನೆ ಹೊರಡಿಸಲಾಗಿದ್ದರೆ, ಅಂತಹ ಜಮೀನುಗಳಿಗೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಭೂದರ ಸಲಹಾ ಸಮಿತಿಯನ್ನು ರಚಿಸಿ, ಕೆ.ಐ.ಎ.ಡಿ. ಕಾಯ್ದೆ 1966ರ ಕಲಂ 29(2)ರಡಿ ಒಪ್ಪಂದದ ದರಗಳಲ್ಲಿ ಭೂ ಪರಿಹಾರ ದರವನ್ನು ನಿಗದಿಪಡಿಸಿ, ಶಿಫಾರಸ್ಸು ಮಾಡಲು ಮೇಲೆ (1)ರಲ್ಲಿ ಓದಲಾದ ದಿನಾಂಕ: 26.11.2012ರ ಆದೇಶದಲ್ಲಿ ಆದೇಶಿಸಲಾಗಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 29(2)ರಂತೆ ಭೂದರ ನಿಗದಿಪಡಿಸುವ ಸಲಹಾ ಸಮಿತಿಗಳನ್ನು ಪುನರ್ ರಚಿಸಿ, ಕೆ.ಐ.ಎ.ಡಿ.ಬಿ. ವತಿಯಿಂದ ಸ್ವಾಧೀನಪಡಿಸುವ 50-00 ಎಕರೆವರೆಗಿನ ಜಮೀನಿಗೆ ಕೆ.ಐ.ಎ.ಡಿ.ಬಿ.ಯ ವಿಶೇಷ ಜಿಲ್ಲಾಧಿಕಾರಿಯವರ ಹಾಗೂ 50-00 ಎಕರೆಗಿಂತ ಹೆಚ್ಚಿನ ವಿಸ್ತೀರ್ಣದ ಜಮೀನನ್ನು ಒಂದೇ ಸ್ಥಳದಲ್ಲಿ ಸ್ವಾಧೀನಪಡಿಸಿ, ಅಂತಿಮ ಅಧಿಸೂಚನೆ ಹೊರಡಿಸಲಾಗಿದ್ದರೆ, ಅಂತಹ ಜಮೀನುಗಳಿಗೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಯವರ

...2)

ಅಧ್ಯಕ್ಷತೆಯಲ್ಲಿ ಭೂದರ ಸಲಹಾ ಸಮಿತಿಯನ್ನು ರಚಿಸಿ, ಒಪ್ಪಂದದ ದರಗಳಲ್ಲಿ ಭೂ ಪರಿಹಾರ ದರವನ್ನು ನಿಗದಿಪಡಿಸಿ, ಶಿಫಾರಸ್ಸು ಮಾಡಲು ಮೇಲೆ (2)ರಲ್ಲಿ ಓದಲಾದ ದಿನಾಂಕ: 24.03.2018ರ ಆದೇಶದಲ್ಲಿ ಆದೇಶಿಸಲಾಗಿದೆ.

ಪ್ರಸ್ತುತ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಕೆಲಸದ ಒತ್ತಡದಿಂದಾಗಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಕಲಂ 29(2)ರಡಿ ಒಪ್ಪಂದದ ದರದಲ್ಲಿ ಭೂ ಪರಿಹಾರ ದರವನ್ನು ನಿಗದಿಪಡಿಸುವ ಸಲುವಾಗಿ ಭೂದರ ನಿರ್ಧರಣಾ ಸಲಹಾ ಸಮಿತಿ ಸಭೆಯನ್ನು ನಡೆಸಲು ಸಾಧ್ಯವಾಗದೇ ಇರುವ ಕಾರಣ, ಭೂಸ್ವಾಧೀನ ಪ್ರಕ್ರಿಯೆಗಳು ವಿಳಂಬವಾಗುತ್ತಿದೆ. ಅಲ್ಲದೆ, ರಾಜ್ಯದಲ್ಲಿ ದೊಡ್ಡ ಮಟ್ಟದ ಲ್ಯಾಂಡ್ ಬ್ಯಾಂಕ್ ಸೃಷ್ಟಿಸುವ ಅವಶ್ಯಕತೆ ಇದ್ದು, ಪ್ರತಿ ಜಿಲ್ಲೆಯಲ್ಲಿಯೂ ಕೈಗಾರಿಕಾ ವಸಾಹತು ಸ್ಥಾಪಿಸುವ ಉದ್ದೇಶ ಹೊಂದಲಾಗಿದ್ದು, ದೊಡ್ಡ ಮಟ್ಟದ ಭೂಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಲಾಗಿರುವುದರಿಂದ ವಿಶೇಷ ಜಿಲ್ಲಾಧಿಕಾರಿ, ಕೆ.ಐ.ಎ.ಡಿ.ಬಿ. ಇವರ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸುವುದು ಸೂಕ್ತವಾಗಿರುತ್ತದೆ.

ಆದ್ದರಿಂದ, ಭೂದರ ನಿಗದಿಪಡಿಸಲು ವಿಶೇಷ ಜಿಲ್ಲಾಧಿಕಾರಿ, ಕೆ.ಐ.ಎ.ಡಿ.ಬಿ. ಇವರ ಅಧ್ಯಕ್ಷತೆಯಲ್ಲಿರುವ ಸಲಹಾ ಸಮಿತಿಗೆ ಈಗಿರುವ 50-00 ಎಕರೆ ಅಧಿಕಾರದ ಪ್ರತ್ಯಾಯೋಜನೆಯನ್ನು ವಿಸ್ತರಿಸಿ, 100-00 ಎಕರೆಗಳಿಗೆ ಹೆಚ್ಚಿಸಲು ಸೂಕ್ತ ಆದೇಶ ಹೊರಡಿಸಲು ನಿರ್ಣಯಿಸಲಾಗಿದೆ.

ಆದುದರಿಂದ, ಈ ಕೆಳಗಿನ ಆದೇಶವನ್ನು ಹೊರಡಿಸಿದೆ:-

**ಸರ್ಕಾರದ ಆದೇಶ ಸಂಖ್ಯೆ: ಸಿಐ 6 ಎಸ್‌ಪಿಕ್ಯೂ(ಇ) 2022,**
**ಬೆಂಗಳೂರು, ದಿನಾಂಕ: 12.05.2022.**

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 29(2)ರಂತೆ ಮಂಡಳಿ ವತಿಯಿಂದ ಸ್ವಾಧೀನಪಡಿಸುವ ಜಮೀನುಗಳಿಗೆ ಭೂದರ ನಿಗದಿಪಡಿಸುವ ಸಂಬಂಧ ಈ ಕೆಳಕಂಡಂತೆ ಸಲಹಾ ಸಮಿತಿಗಳನ್ನು ಪುನರ್ ರಚಿಸಿ, ಸರ್ಕಾರವು ಆದೇಶಿಸಿದೆ.

(1) 100 ಎಕರೆಗಿಂತ ಕಡಿಮೆ ವಿಸ್ತೀರ್ಣಕ್ಕೆ ಭೂಸ್ವಾಧೀನದ ಜಮೀನುಗಳಿಗೆ ಭೂದರ ನಿರ್ಧರಣೆ ಮಾಡಲು ರಚಿಸಲಾದ ಸಮಿತಿಯ ವಿವರಗಳು:-

| | | |
|---|---|---|
| 1. | ವಿಶೇಷ ಜಿಲ್ಲಾಧಿಕಾರಿ, ಕೆ.ಐ.ಎ.ಡಿ.ಬಿ. | ಅಧ್ಯಕ್ಷರು |
| 2. | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, | ಸದಸ್ಯರು |

| | | |
|---|---|---|
| 3. | ಜಿಲ್ಲಾ ನೋಂದಣಾಧಿಕಾರಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆ | |
| 4. | ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್, ಕೆ.ಐ.ಎ.ಡಿ.ಬಿ. | |
| 5. | ಸಂಬಂಧಪಟ್ಟ ಉಪ ವಿಭಾಗಾಧಿಕಾರಿ ಹಾಗೂ ತಹಶೀಲ್ದಾರ್ | |
| 6. | ಕೆ.ಐ.ಎ.ಡಿ.ಬಿ. ಕೇಂದ್ರ ಕಛೇರಿಯ ಪ್ರತಿನಿಧಿ | |
| 7. | 1. ಉಪ ನಿರ್ದೇಶಕರು, ಕೃಷಿ ಇಲಾಖೆ | ವಿಶೇಷ ಆಹ್ವಾನಿತರು |
| | 2. ಉಪ ನಿರ್ದೇಶಕರು / ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ | |
| | 3. ಏಕ ಘಟಕ ಸಂಕೀರ್ಣದ ಭೂಸ್ವಾಧೀನವಾಗಿದ್ದಲ್ಲಿ, ಸಂಬಂಧಪಟ್ಟ ಕಂಪನಿ / ಸಂಸ್ಥೆಯ ಪ್ರತಿನಿಧಿಗಳು | |
| 8. | ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆ.ಐ.ಎ.ಡಿ.ಬಿ. | ಸಂಚಾಲಕರು |

(2) 100 ಎಕರೆಗಿಂತ ಹೆಚ್ಚಿನ ವಿಸ್ತೀರ್ಣದ ಜಮೀನನ್ನು ಒಂದೇ ಸ್ಥಳದಲ್ಲಿ ಭೂಸ್ವಾಧೀನಪಡಿಸಿ, ಅಂತಿಮ ಅಧಿಸೂಚನೆ ಹೊರಡಿಸಲಾಗಿದ್ದರೆ, ಅದರ ಭೂದರ ನಿರ್ಧರಣೆ ಮಾಡಲು ರಚಿಸಲಾದ ಸಮಿತಿಯ ವಿವರಗಳು:-

| | | |
|---|---|---|
| 1. | ಜಿಲ್ಲೆಯ ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2. | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, | ಸದಸ್ಯರು |
| 3. | ಜಿಲ್ಲಾ ನೋಂದಣಾಧಿಕಾರಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆ | |
| 4. | ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್, ಕೆ.ಐ.ಎ.ಡಿ.ಬಿ. | |
| 5. | ಸಂಬಂಧಪಟ್ಟ ಉಪ ವಿಭಾಗಾಧಿಕಾರಿ ಹಾಗೂ ತಹಶೀಲ್ದಾರ್ | |
| 6. | ಕೆ.ಐ.ಎ.ಡಿ.ಬಿ. ಕೇಂದ್ರ ಕಛೇರಿಯ ಪ್ರತಿನಿಧಿ | |
| 7. | 1. ಉಪ ನಿರ್ದೇಶಕರು, ಕೃಷಿ ಇಲಾಖೆ | ವಿಶೇಷ ಆಹ್ವಾನಿತರು |
| | 2. ಉಪ ನಿರ್ದೇಶಕರು / ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ | |

...4)

| | | |
|---|---|---|
| | 3. ಏಕ ಘಟಕ ಸಂಕೀರ್ಣದ ಭೂಸ್ವಾಧೀನವಾಗಿದ್ದಲ್ಲಿ, ಸಂಬಂಧಪಟ್ಟ ಕಂಪನಿ / ಸಂಸ್ಥೆಯ ಪ್ರತಿನಿಧಿಗಳು | |
| 8. | ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆ.ಐ.ಎ.ಡಿ.ಬಿ. | ಸಂಚಾಲಕರು |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ

ಎನ್. ಕುಮಾರ್ 11/5/2022

(ಎನ್. ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

11/5/22

ಪ್ರತಿ:
1) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಕೈಗಾರಿಕಾಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
3) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
4) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
5) ವಿಶೇಷ ಜಿಲ್ಲಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6) ಮುಖ್ಯ ಇಂಜಿನಿಯರ್-1, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
7) ಮುಖ್ಯ ಇಂಜಿನಿಯರ್-2, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
8) ವಿಶೇಷ ಭೂಸ್ವಾಧೀನಾಧಿಕಾರಿ, ಕೆ.ಐ.ಎ.ಡಿ.ಬಿ., ಬೆಂಗಳೂರು/ ಮೈಸೂರು/ ಮಂಗಳೂರು/ ದಾವಣಗೆರೆ/ ಧಾರವಾಡ/ ಕಲಬುರಗಿ/ ತುಮಕೂರು.
9) ಕಾರ್ಯಪಾಲಕ ಇಂಜಿನಿಯರ್, ಕೆ.ಐ.ಎ.ಡಿ.ಬಿ. ವಲಯ ಕಛೇರಿ, ಬೆಂಗಳೂರು-1, 2 & 3/ ಮೈಸೂರು/ ಮಂಗಳೂರು/ ಹಾಸನ/ ತುಮಕೂರು/ ದಾವಣಗೆರೆ/ ಬಳ್ಳಾರಿ/ ಧಾರವಾಡ/ ಬೆಳಗಾವಿ/ ಕಲಬುರಗಿ.
10) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
11) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
12) ನಿರ್ದೇಶಕರು (ತಾಂತ್ರಿಕ ಕೋಶ) ಇವರ ಆಪ್ತ ಸಹಾಯಕರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
13) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.